

# ಅಮೀರ್ ಎದೆಗಾರಿಕೆ

‘ಮೀ ಟೂ’ ಅಭಿಯಾನದ ಬಗ್ಗೆ ಸೂಪರ್‌ಸ್ಟಾರ್‌ಗಳು ಮಾತನಾಡುತ್ತಿಲ್ಲ ಎನ್ನುವ ದೂರುಗಳ ನಡುವೆಯೇ ಅಮೀರ್ ಖಾನ್ ತನ್ನ ಅಭಿಪ್ರಾಯವನ್ನು ಸ್ಪಷ್ಟ ಮಾತುಗಳಲ್ಲಿ ವ್ಯಕ್ತಪಡಿಸಿದ್ದಾನೆ. ತನುಶ್ರೀ ದತ್ತಾ ತಾನು ಎದುರಿಸಿದ ಲೈಂಗಿಕ ಕಿರುಕುಳದ ವಿಚಾರವನ್ನು ಬಾಯಿಬಿಟ್ಟ ಮೇಲೆ ‘ಮೀ ಟೂ’ ಅಭಿಯಾನದಲ್ಲಿ ಹಲವು ದೊಡ್ಡವರ ಸಣ್ಣತನಗಳು ಬಹಿರಂಗಗೊಂಡಿವೆ. ನಾನಾ ಪಾಟೇಕರ್, ಅಲೋಕ್‌ನಾಥ್, ಕೈಲಾಶ್ ಖೇರ್, ಸಾಜಿದ್‌ಖಾನ್, ಅನ್ನು ಕಪೂರ್, ಸುಭಾಷ್ ಕಪೂರ್, ಸುಭಾಷ್ ಘಾಯ್ ಮುಂತಾದವರ ಮೇಲೆ ಆರೋಪಗಳು ಕೇಳಿಬಂದಿವೆ. ಇದೆಲ್ಲದರ ಬಗ್ಗೆ ಅಮೀರ್‌ಖಾನ್ ನೀಡಿರುವ ಅಧಿಕೃತ ಹೇಳಿಕೆ ಈಗ ಮಹತ್ವ ಪಡೆದುಕೊಂಡಿದೆ.

‘ಬಾಲಿವುಡ್‌ನಲ್ಲಿ ಎಲ್ಲ ನಟಿಯರಿಗೂ ಕೆಲಸ ಮಾಡುವ ಸೂಕ್ತ ವಾತಾವರಣ ನಿರ್ಮಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ‘ಮೀ ಟೂ’ ಅಭಿಯಾನಕ್ಕೆ ನನ್ನ ಮತ್ತು ಪತ್ನಿ ಕಿರಣ್‌ರಾವ್ ಸಂಪೂರ್ಣ ಬೆಂಬಲವಿದೆ’ ಎಂದು ಅಮೀರ್ ಖಾನ್ ಪ್ರೊಡಕ್ಷನ್ ವತಿಯಿಂದ ಸ್ಪಷ್ಟ ಹೇಳಿಕೆ ಪ್ರಕಟವಾಗಿದೆ. ಜತೆಗೇ ಲೈಂಗಿಕ ಕಿರುಕುಳ ಹೊತ್ತಿರುವ ನಿರ್ಮಾಪಕ ಸುಭಾಷ್ ಕಪೂರ್ ಅವರ ‘ಮೊಗಲ್’ ಚಿತ್ರ ತಂಡದಿಂದ ತಾನು ಹೊರಬಿದ್ದಿರುವುದಾಗಿಯೂ ಅಮೀರ್ ಪ್ರಕಟಿಸಿದ್ದಾರೆ.

ಅಮೀರ್ ಖಾನ್ ಕಿರುತೆರೆಯಲ್ಲಿ ನಡೆಸುತ್ತಿರುವ ‘ಸತ್ಯಮೇವ ಜಯತೇ’ ಕಾರ್ಯಕ್ರಮ ಇಂತಹ ಸಾಮಾಜಿಕ ಸಮಸ್ಯೆಗಳ ಬಗ್ಗೆಯೂ ಇದ್ದು ಸಾಕಷ್ಟು ಜನಪ್ರಿಯವಾಗಿದೆ. ಈಗ ಈ ಕಾರ್ಯಕ್ರಮದ 4ನೇ ಸೀಸನ್ ಮುಂದಿನ ಜನವರಿಯಲ್ಲಿ ಆರಂಭವಾಗಲಿದೆ. ಬಹುತೇಕ ‘ಮೀ ಟೂ’ ಅಭಿಯಾನಕ್ಕೆ ಸಂಬಂಧಿಸಿಯೇ ‘ಸತ್ಯಮೇವ ಜಯತೇ’ ಕಾರ್ಯಕ್ರಮ ಇರಲಿದೆ ಎನ್ನುವ ಸುಳಿವು ಸಿಕ್ಕಿದೆ. ಅಮೀರ್ ಖಾನ್ ಸ್ಪಷ್ಟ ನಿಲುವಿನ ಬಗ್ಗೆ ಜಾಲತಾಣಗಳಲ್ಲೂ ಮೆಚ್ಚುಗೆ ವ್ಯಕ್ತವಾಗಿದೆ. ಬೇರೆಲ್ಲ ಸೂಪರ್‌ಸ್ಟಾರ್‌ಗಳು ಮುಗುಂ ಆಗಿದ್ದರೆ, ಅಮೀರ್ ಸಾಕಷ್ಟು ಎದೆಗಾರಿಕೆ ಪ್ರದರ್ಶಿಸಿದ್ದಾರೆ ಎನ್ನುವುದು ಅಭಿಮಾನಿಗಳಿಗೂ ಖುಷಿ ತಂದಿದೆ.



# ಪರಿಣೀತಿ ಕಿವಿಮಾತು

ಪರಿಣೀತಿ ಚೋಪ್ರಾ ಬಾಲಿವುಡ್‌ನಲ್ಲಿ ಗಟ್ಟಿಯಾಗಿ ಕಾಲೂರಿರುವ ನಟಿ. ‘ಮೀ ಟೂ’ ಅಭಿಯಾನದ ಬಗ್ಗೆ ನಟಿಯರಿಗೆ ಆಕೆ ನೀಡಿರುವ ಕಿವಿಮಾತು ಎಲ್ಲರೂ ಗಮನಿಸುವಂತಿದೆ. ‘ಸಾಮಾನ್ಯವಾಗಿ ಕೆಲಸದ ಸಂದರ್ಭದಲ್ಲಿ ಪುರುಷರು ಯಾವ ರೀತಿ ವರ್ತಿಸುತ್ತಿದ್ದಾರೆ ಎನ್ನುವುದರ ಸುಳಿವು ಹೆಣ್ಣುಮಕ್ಕಳಿಗೆ ಮೊದಲೇ ಸಿಗುತ್ತದೆ. ಹೆಣ್ಣಿಗೆ ಅಂತಹದ್ದೊಂದು ವಿಶೇಷ ಗ್ರಹಿಕೆಯ ಶಕ್ತಿ ಇದೆ. ಲೈಂಗಿಕ ಕಿರುಕುಳದ ಸಣ್ಣ ಸೂಚನೆ ಸಿಕ್ಕಿದರೂ ಹೆಣ್ಣುಮಕ್ಕಳು ತಕ್ಷಣ ಅದನ್ನು ಪ್ರತಿಭಟಿಸಬೇಕು. ಹಳೆಯ ಪ್ರಕರಣಗಳ ಬಗ್ಗೆ ಮಾತನಾಡುವುದಿದ್ದರೂ ಧೈರ್ಯದಿಂದ ಮಾತನಾಡಿ. ನೀವು ಯಾರಿಗೂ ಹೆದರಬೇಕಿಲ್ಲ’ ಎಂದಿದ್ದಾಳೆ ಪರಿಣೀತಿ.

ತನ್ನ ಸ್ನಿಗ್ಧ ಸೌಂದರ್ಯ ಮತ್ತು ಅಭಿನಯದಿಂದ ಬಾಲಿವುಡ್‌ನಲ್ಲಿ ಸಾಕಷ್ಟು ವೇಗವಾಗಿ ಮೇಲೇರಿರುವ ಪರಿಣೀತಿ ಕೈಯಲ್ಲಿ ಈಗ ಸಾಕಷ್ಟು ಚಿತ್ರಗಳಿವೆ. ಅಕ್ಷಯ ಕುಮಾರ್ ಜತೆಗೆ ‘ಕೇಸರಿ’, ಅರ್ಜುನ್ ಕಪೂರ್ ಜತೆ ‘ಸಂದೀಪ್ ಔರ್ ಪಿಂಕಿ ಫರಾರ್’ ಮತ್ತು ಸಿದ್ಧಾರ್ಥ್ ಮಲ್ಹೋತ್ರಾ ಜತೆಗೆ ‘ಜಬಾರಿಯಾ ಜೋಡಿ’ ಪರಿಣೀತಿ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿರುವ ಚಿತ್ರಗಳು. ಅದರಲ್ಲೂ ‘..ಫರಾರ್’ ಚಿತ್ರ ಯಶರಾಜ್ ಬ್ಯಾನರ್‌ನದ್ದು.

■ ಬಿಂದು